**ಕರ್ನಾಟಕ ಸರ್ಕಾರ**
**ಮಕ್ಕಳ ರಕ್ಷಣಾ ನಿರ್ದೇಶನಾಲಯ**
**ಮೂರನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-01**

---

ಸಂ:ಮರನಿ/ಮರ/ /2021-22 ದಿನಾಂಕ: 31-05-2021

ನಿರ್ದೇಶಕರು
ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ
ಬೆಂಗಳೂರು.

ಮಾನ್ಯರೇ.

ವಿಷಯ: ಕೋವಿಡ್-19 ಸೋಂಕಿನಿಂದಾಗಿ ಬಾಧಿತರಾದ ಸಂತ್ರಸ್ಥ ವಿಕಲಚೇತನ ಮಕ್ಕಳನ್ನು ವಿಕಚೇತನರ ವಸತಿ ಶಾಲೆಗಳಲ್ಲಿ ದಾಖಲು ಮಾಡಿಕೊಳ್ಳುವ ಕುರಿತು.

ಉಲ್ಲೇಖ: ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ.4/2020

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಕೋವಿಡ್-19ರ ಸೋಂಕಿನ ಕಾರಣ ಲಾಕ್‌ಡೌನ್ ಆಗಿರುವ ಹಿನ್ನೆಲೆಯಲ್ಲಿ ವಿಕಲಚೇತನರ ವಸತಿಯುತ ಶಾಲೆಗಳಲ್ಲಿನ ಮಕ್ಕಳನ್ನು ಮನೆಗೆ ಕಳುಹಿಸಿ ಅವುಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಪರಿಶೀಲನಾ ಸಭೆಯಲ್ಲಿ ತಿಳಿದುಬಂದಿರುತ್ತದೆ.

ರಾಜ್ಯದಲ್ಲಿ ಹಲವಾರು ವಿಕಲಚೇತನರ ವಸತಿ ಶಾಲೆಗಳು ಸರ್ಕಾರದಿಂದ ಅನುದಾನ ಪಡೆದು ಕಾರ್ಯನಿರ್ವಹಿಸುತ್ತಿರುತ್ತವೆ.

ಪ್ರಸ್ತುತದ ಕೋವಿಡ್-19ರ ಸೋಂಕಿನ ಕಾರಣದಿಂದಾಗಿ ಕೆಲವು ಮಕ್ಕಳು ಒಬ್ಬರು ಅಥವಾ ಇಬ್ಬರೂ ಪೋಷಕರನ್ನು ಕಳೆದುಕೊಂಡು ಅನಾಥರಾಗಿ ಸಂಕಷ್ಟಕ್ಕೀಡಾಗುತ್ತಿದ್ದು, ವಿಕಲಚೇತನ ಮಕ್ಕಳು ಅನಾಥರಾದಲ್ಲಿ ಅಂತಹವರ ಪಾಲನೆ-ರಕ್ಷಣೆಗೆ ಉಲ್ಲೇಖಿತ ಸರ್ವೋಚ್ಚ ನ್ಯಾಯಾಯಲದ ಆದೇಶದ ಮೇರೆಗೆ ಸೂಕ್ತ ಕ್ರಮವಹಿಸಬೇಕಾಗಿರುತ್ತದೆ.

ಪ್ರಸ್ತುತ ಜಿಲ್ಲೆಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ ವಿಕಲಚೇತನ ಮಕ್ಕಳನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಹಾಜರುಪಡಿಸಿದಾಗ ಮಕ್ಕಳ ಕಲ್ಯಾಣ ಸಮಿತಿಗಳು ಸರ್ಕಾರದ ಅನುದಾನ ಪಡೆಯುತ್ತಿರುವ ವಿಕಲಚೇತನ ಮಕ್ಕಳ ವಸತಿ ಶಾಲೆಗಳಲ್ಲಿ ದಾಖಲಿಸಿಕೊಳ್ಳಲು ಪ್ಲೇಸ್‌ಮೆಂಟ್ ಆರ್ಡರ್ ನೀಡುತ್ತಿದ್ದು, ಲಾಕ್‌ಡೌನ್ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಗಳು ತಾತ್ಕಾಲಿಕವಾಗಿ ಮುಚ್ಚಿರುವುದರಿಂದ ಈ ಆದೇಶಗಳು ಅನುಪಾಲನೆಯಾಗುತ್ತಿಲ್ಲ.

ಆದರೆ ಸಂತ್ರಸ್ಥ ಅಂಧ ಮಕ್ಕಳು, ಕಿವುಡ-ಮೂಗ ಮಕ್ಕಳು, ಬುದ್ಧಿಮಾಂದ್ಯ ಮಕ್ಕಳನ್ನು ನೋಡಿಕೊಳ್ಳಲು ವಿಶೇಷ ಪರಿಣಿತಿ/ತರಬೇತಿ ಹೊಂದಿದ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಇಂತಹ ವಿಕಲಚೇತನ ಮಕ್ಕಳ ಹಿತದೃಷ್ಟಿಯಿಂದ ಅವರಿಗೆ ವಿಕಲಚೇತನರ ವಸತಿ ಶಾಲೆಗಳಲ್ಲಿ ಆಶ್ರಯ ಕಲ್ಪಿಸಿ ಪಾಲನೆ-ರಕ್ಷಣೆ ಮಾಡುವುದು ಅನಿವಾರ್ಯವಾಗಿರುತ್ತದೆ. ಇಂತಹ ಮಕ್ಕಳನ್ನು ಸಾಮಾನ್ಯ/ಸಹಜ ಮಕ್ಕಳಿಗಾಗಿ

ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಬಾಲಕರ ಹಾಗೂ ಬಾಲಕಿಯರ ಬಾಲಮಂದಿರಗಳಲ್ಲಿ ದಾಖಲು ಮಾಡಿಕೊಳ್ಳಲು ಸದರಿ ಮಕ್ಕಳ ಹಿತದೃಷ್ಟಿಯಿಂದ ಸೂಕ್ತವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ

1) ಸರ್ಕಾರದ ಅನುದಾನ ಪಡೆಯುತ್ತಿರುವ ವಿಕಲಚೇತನ ಮಕ್ಕಳ ವಸತಿ ಶಾಲೆಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ ಯಾವುದೇ ವಿಕಲಚೇತನ ಮಕ್ಕಳನ್ನು ರಕ್ಷಿಸಿ, ಮಕ್ಕಳ ಕಲ್ಯಾಣ ಸಮಿತಿಗಳಿಗೆ ಹಾಜರುಪಡಿಸಿದಾಗ ಮಕ್ಕಳ ಕಲ್ಯಾಣ ಸಮಿತಿಗಳು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015ರನ್ವಯ ನೀಡಿರುವ ಸ್ಥಳಾದೇಶಗಳನ್ನು(ಪ್ಲೇಸ್‌ಮೆಂಟ್ ಆರ್ಡರ್) ಅನುಪಾಲಿಸಲು ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿದೆ

2) ಲಾಕ್‌ಡೌನ್ ಅಥವಾ ಅನ್‌ಲಾಕ್ ಅವಧಿಯಲ್ಲಿ ಕೋವಿಡ್-19ರ ಹಾಗೂ ಇತರೆ ಕಾರಣಗಳಿಂದಾಗಿ ಸಂಕಷ್ಟಕ್ಕೀಡಾಗುವ ವಿಕಲಚೇತನ ಮಕ್ಕಳನ್ನು ಗುರುತಿಸಿ ಅವರನ್ನು ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಿ ಸರ್ಕಾರದ ಅನುದಾನ ಪಡೆಯುತ್ತಿರುವ ವಿಕಲಚೇತನ ಮಕ್ಕಳ ವಸತಿ ಶಾಲೆಗಳಲ್ಲಿ ದಾಖಲು ಮಾಡಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯವರಿಗೆ ನಿರ್ದೇಶಿಸಬೇಕೆಂದು ಸಹ ಕೋರಿದೆ.

ತಮ್ಮ ವಿಶ್ವಾಸಿ,

31.05.2021

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

**ಪ್ರತಿಯನ್ನು:**

1. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು.
2. ರಾಜ್ಯದ ಎಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
3. ರಾಜ್ಯದ ಎಲ್ಲಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು.
4. ರಾಜ್ಯದ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರಿಗೆ.
5. ರಾಜ್ಯದ ಎಲ್ಲಾ ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ ಇವರಿಗೆ.
6. ಕಛೇರಿ ಪ್ರತಿ.

**ಕರ್ನಾಟಕ ಸರಕಾರ**
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ನೆಲಮಹಡಿ, ಡಾ:ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು 01
ದೂರವಾಣಿ ಸಂಖ್ಯೆ: 080-22866066, 22860907 ಇ-ಮೇಲ್: dirdwdscka@gmail.com

---

ಸಂಖ್ಯೆ:ವಿಹಿನಿ/ಸಿಬ್ಬಂದಿ/ಸಿ.3/ಕೋವಿಡ್-19/2020-21 — ದಿನಾಂಕ:31.05.2021

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು,
30 ಜಿಲ್ಲೆಗಳು

**"ಆದ್ಯತೆ ಮೇರೆಗೆ"**

ಮಾನ್ಯರೇ,

**ವಿಷಯ:** ಕೋವಿಡ್-19ರ ಸೋಂಕಿನಿಂದಾಗಿ ಬಾಧಿತರಾದ ಸಂತ್ರಸ್ಥ ವಿಕಲಚೇತನ ಮಕ್ಕಳನ್ನು ಅಂಗವಿಕಲ ಮಕ್ಕಳ ಶಿಶುಕೇಂದ್ರೀಕೃತ ಯೋಜನೆಯ ವಿಶೇಷ ವಸತಿಯುತ ಮತ್ತು ರಾಜ್ಯ ಅನುದಾನ ಸಂಹಿತೆ-1982ರ ವಸತಿ ಶಾಲೆಗಳಲ್ಲಿ ದಾಖಲು ಮಾಡಿಕೊಳ್ಳಲು ಕ್ರಮವಹಿಸುವ ಬಗ್ಗೆ

**ಉಲ್ಲೇಖ:**
1. ಸರ್ವೋಚ್ಚ ನ್ಯಾಯಾಲಯದ ರಿಟ್‌ಅರ್ಜಿ ಸಂ.4/2020
2. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಮರನಿ/ಮರ/ /2021-22, ದಿನಾಂಕ:31.05.2021
3. ದಿನಾಂಕ:27.05.2021ರಂದು ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಗೂಗಲ್ ಸಭೆಯಲ್ಲಿ ಚರ್ಚಿಸಿದಂತೆ

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ಕೋವಿಡ್-19ರ ಸೋಂಕಿನ ಕಾರಣದಿಂದಾಗಿ ಕೆಲವು ಮಕ್ಕಳು ಒಬ್ಬರು ಅಥವಾ ಇಬ್ಬರೂ ಪೋಷಕರನ್ನು ಕಳೆದುಕೊಂಡು ಅನಾಥರಾಗಿ ಸಂಕಷ್ಟಕ್ಕೀಡಾಗುತ್ತಿದ್ದು, ವಿಕಲಚೇತನ ಮಕ್ಕಳು ಅನಾಥರಾದಲ್ಲಿ ಅಂತಹವರ ಪಾಲನೆ-ರಕ್ಷಣೆಗೆ ಉಲ್ಲೇಖಿತ (1)ರ ಸರ್ವೋಚ್ಚ ನ್ಯಾಯಾಯಲದ ಆದೇಶದ ಮೇರೆಗೆ ಸೂಕ್ತ ಕ್ರಮವಹಿಸಬೇಕಾಗಿರುತ್ತದೆ.

ಸಂತ್ರಸ್ಥ ಅಂಧ ಮಕ್ಕಳು, ಕಿವುಡ-ಮೂಗ ಮಕ್ಕಳು, ಬುದ್ಧಿಮಾಂದ್ಯ ಮಕ್ಕಳನ್ನು ನೋಡಿಕೊಳ್ಳಲು ವಿಶೇಷ ಪರಿಣಿತಿ/ತರಬೇತಿ ಹೊಂದಿದ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಇಂತಹ ವಿಕಲಚೇತನ ಮಕ್ಕಳ ಹಿತದೃಷ್ಟಿಯಿಂದ ಅವರಿಗೆ ವಿಕಲಚೇತನರ ವಸತಿ ಶಾಲೆಗಳಲ್ಲಿ ಆಶ್ರಯ ಕಲ್ಪಿಸಿ ಪಾಲನೆ-ರಕ್ಷಣೆ ಮಾಡುವುದು ಅನಿವಾರ್ಯವಾಗಿರುತ್ತದೆ. ಇಂತಹ ಮಕ್ಕಳನ್ನು ಸಾಮಾನ್ಯ/ಸಹಜ ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಬಾಲಕರ ಹಾಗೂ ಬಾಲಕಿಯರ ಬಾಲಮಂದಿರಗಳಲ್ಲಿ ದಾಖಲು ಮಾಡಿಕೊಳ್ಳಲು ಸದರಿ ಮಕ್ಕಳ ಹಿತದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲವೆಂದು ಉಲ್ಲೇಖಿತ (2)ರಲ್ಲಿ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರುರವರು ಕೋರಿರುತ್ತಾರೆ.

..2ಕ್ಕೆ

ಈ ಹಿನ್ನೆಲೆಯಲ್ಲಿ ಸರ್ಕಾರದ ಅನುದಾನ ಪಡೆಯುತ್ತಿರುವ ವಿಕಲಚೇತನ ಮಕ್ಕಳ ವಸತಿ ಶಾಲೆಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ ಯಾವುದೇ ವಿಕಲಚೇತನ ಮಕ್ಕಳನ್ನು ರಕ್ಷಿಸಿ, ಮಕ್ಕಳ ಕಲ್ಯಾಣ ಸಮಿತಿಗಳಿಗೆ ಹಾಜರುಪಡಿಸಿದಾಗ ಮಕ್ಕಳ ಕಲ್ಯಾಣ ಸಮಿತಿಗಳು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತುರಕ್ಷಣೆ) ಕಾಯ್ದೆ, 2015ರನ್ವಯ ನೀಡಿರುವ ಸ್ಥಳಾದೇಶಗಳನ್ನು (ಪ್ಲೇಸ್‌ಮೆಂಟ್‌ಆರ್ಡರ್) ಅನುಪಾಲಿಸಲು ಸೂಕ್ತ ಕ್ರಮವಹಿಸತಕ್ಕದ್ದು. ಹಾಗೆಯೇ ಸದ್ಯದ ಲಾಕ್‌ಡೌನ್ ಅವಧಿಯಲ್ಲಿ ಕೋವಿಡ್-19ರ ಹಾಗೂ ಇತರೆ ಕಾರಣಗಳಿಂದಾಗಿ ಸಂಕಷ್ಟಕ್ಕೀಡಾಗುವ ವಿಕಲಚೇತನ ಮಕ್ಕಳನ್ನು ಗುರುತಿಸಿ ಅವರನ್ನು ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಿ ಸರ್ಕಾರದ ಅನುದಾನ ಪಡೆಯುತ್ತಿರುವ ವಿಕಲಚೇತನ ಮಕ್ಕಳ ವಸತಿ ಶಾಲೆಗಳಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಉಲ್ಲೇಖ(1)ರಂತೆ ಮತ್ತು (2)ರಲ್ಲಿ ಕೋರಿರುವ ವಿಷಯವು ಅತ್ಯಂತ ಗಂಭೀರವಾಗಿರುವುದರಿಂದ ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇಲಾಖೆಯ ವತಿಯಿಂದ ರಾಜ್ಯ ಅನುದಾನ ಸಂಹಿತೆ-1982 ಮತ್ತು ಅಂಗವಿಕಲ ಮಕ್ಕಳ ಶಿಶುಕೇಂದ್ರೀಕೃತ ಯೋಜನೆಯ ವಿಶೇಷ ವಸತಿಯುತ ಶಾಲೆಗಳಲ್ಲಿ ಅಂಧ ಮಕ್ಕಳು, ಕಿವುಡ-ಮೂಗ ಮಕ್ಕಳು, ಬುದ್ಧಿಮಾಂದ್ಯ ಮಕ್ಕಳನ್ನು ನೋಡಿಕೊಳ್ಳಲು ವಿಶೇಷ ಪರಿಣಿತಿ/ತರಬೇತಿ ಹೊಂದಿದ ಸಿಬ್ಬಂದಿಗಳು ಲಭ್ಯವಿರುವುದರಿಂದ ಇಂತಹ ವಿಕಲಚೇತನ ಮಕ್ಕಳ ಹಿತದೃಷ್ಟಿಯಿಂದ ಅವರಿಗೆ ವಿಕಲಚೇತನರ ವಸತಿಯುತ ಶಾಲೆಗಳಲ್ಲಿ ಆಶ್ರಯ ಕಲ್ಪಿಸಿ ಪಾಲನೆ-ರಕ್ಷಣೆ ಮಾಡುವುದು ಸದ್ಯದ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿರುತ್ತದೆ. ಈ ಬಗ್ಗೆ ಈಗಾಗಲೇ ದಿನಾಂಕ:27.05.2021ರಂದು ಗೂಗಲ್ ಸಭೆಯಲ್ಲಿ ಚರ್ಚಿಸಿರುವಂತೆ, ನಿಮ್ಮ ಜಿಲ್ಲೆಗಳಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಅನುದಾನ ಸಂಹಿತೆ-1982 ಮತ್ತು ಅಂಗವಿಕಲ ಮಕ್ಕಳ ಶಿಶುಕೇಂದ್ರೀಕೃತ ಯೋಜನೆಯ ವಿಶೇಷ ವಸತಿಯುತ ಶಾಲೆಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವಂತೆ ಸದ್ಯದ ಲಾಕ್‌ಡೌನ್ ಅವಧಿಯಲ್ಲಿ ಪ್ರಸ್ತುತ ಕೋವಿಡ್-19ರ ಸೋಂಕಿನ ಕಾರಣದಿಂದಾಗಿ ಕೆಲವು ಮಕ್ಕಳು ಒಬ್ಬರು ಅಥವಾ ಇಬ್ಬರೂ ಪೋಷಕರನ್ನು ಕಳೆದುಕೊಂಡ ವಿಕಲಚೇತನ ಮಕ್ಕಳಿಗೆ ವಸತಿಯುತ ಶಾಲೆಯಲ್ಲಿ ಅವಕಾಶ ಕಲ್ಪಿಸಿಕೊಡಲು ಸೂಚಿಸಿದೆ. ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ನಿರ್ದೇಶನಾಲಯಕ್ಕೆ ವರದಿ ಮಾಡತಕ್ಕದ್ದು.

ತಮ್ಮ ವಿಶ್ವಾಸಿ,

ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ,
ಬೆಂಗಳೂರು

ಕೋವಿಡ್ 19ರ ಅವಧಿಯಲ್ಲಿ ನಿರಾಶ್ರಿತ ಮಕ್ಕಳಿಗೆ ವಸತಿ ಮತ್ತು ಊಟದ ವ್ಯವಸ್ಥೆ ಕಲ್ಪಿಸಲು ಆಯ್ಕೆ ಮಾಡಲಾದ ಸ್ವಯಂ ಸೇವಾ ಸಂಸ್ಥೆಗಳ ವಿವರ

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು | ಅಂಗವಿಕಲತೆಯ ವಿಧ | ಬೋಧಕರು | ಬೋಧಕೇತರರು | ಒಟ್ಟು ಮಕ್ಕಳ ಸಂಖ್ಯೆ |
|---|---|---|---|---|---|---|---|---|
| 1 | ಬೆಂಗಳೂರು ನಗರ | 1 | ಮಾತೃ ವಿದ್ಯಾ ಸಂಸ್ಥೆ ಬುದ್ಧಿಮಾಂದ್ಯ ಮಕ್ಕಳ ಶಾಲೆ ಯಲಹಂಕಾ ಬೆಂಗಳೂರು | **ಬುದ್ಧಿಮಾಂದ್ಯ ಮಕ್ಕಳ ಶಾಲೆ** | **ಬುದ್ಧಿಮಾಂದ್ಯ ಮಕ್ಕಳ** | **1982ರ ರಾಜ್ಯ ಅನುದಾನ ಸಂಹಿತೆ** | | ... |
| | | 2 | ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್, # 11, ವಿಲ್ಲಾ ಸುಚಿತ, 1ನೇ ಅಡ್ಡರಸ್ತೆ, 17ನೇ ಎ ಮುಖ್ಯರಸ್ತೆ, 2ನೇ ಹಂತ, ಜೆ.ಪಿ.ನಗರ ಬೆಂಗಳೂರು ದೂ.ಸಂ: 25721444 9449864772/9448365929 | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಹೆಚ್.ಎಸ್.ಆರ್ ಬಡಾವಣೆ ಬೆಂಗಳೂರು mahantesh@samarthnam.org | ಬುದ್ಧಿಮಾಂದ್ಯ ವಸತಿಯುತ | 14 | 14 | 97 |
| | | 3 | ಡಾ.ಎಸ್.ಆರ್ ಚಂದ್ರಶೇಖರ್ ವಾಕ್ ಶ್ರವಣ, ಸಂಸ್ಥೆ, ಹೆಣ್ಣೂರು ಮುಖ್ಯರಸ್ತೆ, ಕರಿಯನಪಾಳ್ಯ, ಲಿಂಗರಾಜಪುರಂ, ಬೆಂಗಳೂರು–560084 ದೂ.ಸಂ: 25460405/25470037 | ಸುನಾದ ಕಿವುಡು ಮಕ್ಕಳ ಶಾಲೆ ಲಿಂಗರಾಜಪುರಂ ಬೆಂಗಳೂರು ishroot@gmail.com | ಕಿವುಡು ಮಕ್ಕಳ ಶಾಲೆ ವಸತಿರಹಿತ | 21 | 16 | 174 |
| | | 4 | ಶ್ರೀ ಶತಶೃಂಗ ವಿದ್ಯಾ ಸಂಸ್ಥೆ ರಿ, ಶ್ರೀ ಸಾಯಿಬಾಬಾ ದೇವಸ್ಥಾನದ ಹತ್ತಿರ, ಕಾಮಾಕ್ಷಿಪಾಳ್ಯ ಪೋಲೀಸ್ ಸ್ಟೇಷನ್ ಹಿಂಭಾಗ, ಮಾಗಡಿ ಮುಖ್ಯರಸ್ತೆ, ಬೆಂಗಳೂರು-560079 ಮೊ.ಸಂ.9141278067/9341155451 | ಶ್ರೀಶತಶೃಂಗ ಕಿವುಡು ಮಕ್ಕಳ ವಸತಿಯುತ ಶಾಲೆ ಬೆಂಗಳೂರು saissvs@gmail.com | ಕಿವುಡು ಮಕ್ಕಳ ಶಾಲೆ 115+37 | 17 | 29 | 152 |
| | | 5 | ಸ್ಪಾಸ್ಟಿಕ್ ಸೊಸೈಟಿ ಆಫ್ ಕರ್ನಾಟಕ, ನಂ.31, 5ನೇ ಕ್ರಾಸ್, 5ನೇ ಮೇನ್, 1ನೇ ಹಂತ, ಇಂದಿರಾನಗರ, ಬೆಂಗಳೂರು–38 ದೂ.ಸಂ.40745900/01/02 | ಬುದ್ಧಿಮಾಂದ್ಯ/ಬಹುವಿಧ ವಿಕಲತೆಯುಳ್ಳ ಮಕ್ಕಳ ವಸತಿರಹಿತ ಶಾಲೆ spasticsocietyofkarnataka@gmail.com office@spasticsocietyofkarnataka.org | ಬುದ್ಧಿಮಾಂದ್ಯ | 7 | 6 | 10 |
| 2 | ಬೆಂಗಳೂರು ಗ್ರಾ | 1 | ಸರ್ವೋದಯ ಸರ್ವೀಸ್ ಸೊಸೈಟಿ ರಿ, ಶಿಡ್ಲಘಟ್ಟ ರಸ್ತೆ, ಚಂದೇನಹಳ್ಳಿ ಗೇಟ್, ವಿಜಯಪುರ, ದೇವನಹಳ್ಳಿ ತಾ॥, ಬೆಂಗಳೂರು ಗ್ರಾ ಜಿಲ್ಲೆ–563125 ದೂ.ಸಂ: 080–27667047 | ಲೈಫ್ ಲೈಟ್ ಬುದ್ಧಿವಿಕಲಚೇತನ ಮಕ್ಕಳ ವಸತಿಯುತ ಪಾಠಶಾಲೆ, ಶಿಡ್ಲಘಟ್ಟ ರಸ್ತೆ, ಚಂದೇನಹಳ್ಳಿ ಗೇಟ್, ವಿಜಯಪುರ, ದೇವನಹಳ್ಳಿ ತಾ॥, ಬೆಂಗಳೂರು ಗ್ರಾ ಜಿಲ್ಲೆ. | ಬುದ್ಧಿಮಾಂದ್ಯ ವಸತಿಯುತ | 12 | 14 | 85 |
| | | 2 | ಧರಿತ್ರಿ ಟ್ರಸ್ಟ್ (ರಿ), ನರಸೀಪುರ, ನೆಲಮಂಗಲ ತಾ॥, ಬೆಂಗಳೂರು ಗ್ರಾ ಜಿಲ್ಲೆ (ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ) ದೂ.ಸಂ.:94483553888/23567518 | ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ | ಬುದ್ಧಿಮಾಂದ್ಯ 30+20 | 7 | 9 | 50 |

| | | | | | | | | |
|---|---|---|---|---|---|---|---|---|
| 3 | **ಕೋಲಾರ** | **1** | ಶ್ರೀ ಶತಶೃಂಗ ವಿದ್ಯಾ ಸಂಸ್ಥೆ ರಿ ಬೆಂಗಳೂರು | ಶ್ರೀ ಸಾಯಿ ಶತಶೃಂಗ ಕಿವುಡು ಮಕ್ಕಳ ವಸತಿಯುತ ಶಾಲೆ ಬಂಗಾರಪೇಟೆ ಕೋಲಾರ | ಕಿವುಡು ಮಕ್ಕಳ ಶಾಲೆ 65+13 | 8 | 16 | 78 |
| 4 | **ಶಿವಮೊಗ್ಗ** | **1** | ನವಚೇತನ ಬುದ್ಧಿಮಾಂದ್ಯ ಮಕ್ಕಳ ಕ್ಷೇಮಾಭಿವೃದ್ಧಿ ಸಂಸ್ಥೆ, ಕೆ.ಇ.ಬಿ.ಕಾಲೋನಿ, ಸೊರಬ–577439, ಶಿವಮೊಗ್ಗ ಜಿಲ್ಲೆ ಮೊ.ಸಂ: 9449159963/ 948246644 | ನವಚೇತನ ಬುದ್ಧಿಮಾಂದ್ಯ ಮಕ್ಕಳ ವಸತಿ ಯುತ ಶಾಲೆ, ಹೊಸಪೇಟೆ ಹಕ್ಕಲು, ಹಳೇ ಸೊರಬ (ತಾ), ಶಿವಮೊಗ್ಗ ಜಿಲ್ಲೆ–577429 | ಬುದ್ಧಿಮಾಂದ್ಯ | | | 63 |
| | | **2** | ಶಾಂತಿನಿಕೇತನ ಚಾರಿಟೇಬಲ್ ಟ್ರಸ್ಟ್ ರಿ ಶಿವಮೊಗ್ಗ ದೂ.ಸಂ. 9741338315 | ಮದರ್ ಥೇರಸಾ ಕಿವುಡು ಮತ್ತು ಮೂಕ ಮಕ್ಕಳ ವಸತಿಶಾಲೆ | ಕಿವುಡು ಮಕ್ಕಳ ವಸತಿಶಾಲೆ | 14 | 11 | 84 |
| 5 | **ತುಮಕೂರು** | **1** | ಬುದ್ಧಿಮಾಂದ್ಯ ಮಕ್ಕಳ ಪಾಲಕರ ಸಂಘ ರಿ ಕೆಆರ್‌ಜಿ.ಎಂ.ಎಸ್ ತುಮಕೂರು | ಮಾನಸ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ ತುಮಕೂರು | ಬುದ್ಧಿಮಾಂದ್ಯ ವಸತಿರಹಿತ | 9 | 7 | 54 |
| 6 | **ರಾಮನಗರ** | **1** | ಶ್ರೀ ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟ್ ರಿ, ಅರಚಕರಹಳ್ಳಿ, ಬಿ.ಎಂ.ರೋಡ್, ನಾಗಮಂಗಲ ಮಂಡ್ಯ ಜಿಲ್ಲೆ ದೂ.ಸಂ: 27201090 ಠಿಛಿಜಿಛ@ರುಚಿಟ.ಛಿಡು ಮೊ.ಸಂ.9740222169 | ಶ್ರೀ ಬಾಲಗಂಗಾಧರ ನಾಥಸ್ವಾಮಿ ಅಂಧರ ವಸತಿಯುತ ಶಾಲೆ ಅರ್ಚಕರಹಳ್ಳಿ ರಾಮನಗರ | ಅಂಧ ಮಕ್ಕಳು ವಸತಿಯುತ | 18 | 35 | 194 |
| 7 | **ಚಿಕ್ಕಬಳ್ಳಾಪುರ** | **1** | ಆಶಾಕಿರಣ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ, ಶಿಡ್ಲಘಟ್ಟ ಚಿಕ್ಕಬಳ್ಳಾಪುರ (ಎಂಆರ್) | ಆಶಾಕಿರಣ ಅಂಧ ಮಕ್ಕಳ ವಸತಿಶಾಲೆ | ಅಂಧ ಮಕ್ಕಳು ವಸತಿಯುತ | 3 | 8 | 36 |
| | | **2** | ಆಶಾಕಿರಣ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ, ಹೆಲ್ತ ಕಾಲೋನಿ, ಅಂಚೆ ಕಛೇರಿ ರಸ್ತೆ, ಶಿಡ್ಲಘಟ್ಟ ಟೌನ್, ನೆಲ್ಲಿಮರದಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ ದೂ.ಸಂ: 08158–255600 | ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಆಣೂರು, ತಿಪ್ಪೇನಹಳ್ಳಿ ಅಂಚೆ, ಶಿಡ್ಲಘಟ್ಟ ತಾ॥, ಚಿಕ್ಕಬಳ್ಳಾಪುರ | ಬುದ್ಧಿಮಾಂದ್ಯ | 5 | 6 | 35 |
| 8 | ಚಿತ್ರದುರ್ಗ | **1** | ಸಿದ್ದೇಶ್ವರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ), ಹಿರಿಯೂರು ತಾ॥, ಚಿತ್ರದುರ್ಗ ಜಿಲ್ಲೆ | ಸಿದ್ದೇಶ್ವರ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ವಿಶೇಷ ಶಾಲೆ | ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ | 14 | 14 | 98 |
| | | **2** | ಅಸೋಸಿಯೇಷನ್ ಫಾರ್ ದಿ ಡೆಫ್ ಅಚಿಡ್ ಡಂಬ್(ರಿ), ಕಿವುಡು ಮೂಗರ ಸಂಘಟನೆ ರಿ, ರಾಜೀವ್‌ನಗರ, ನಾಯಕನಹಟ್ಟಿ ರೋಡ್, ಚಳ್ಳಕೆರೆ ತಾ॥, ಚಿತ್ರದುರ್ಗ | ಬೆಳಕು ಕಿವುಡು ಮೂಗರ ಮಕ್ಕಳ ವಸತಿಯುತ ಶಾಲೆ, ರಾಜೀವನಗರ, ನಾಯಕನಹಟ್ಟಿ ರೋಡ್, ಚಳ್ಳಕೆರೆ (ತಾ), ಚಿತ್ರದುರ್ಗ (ಜಿ) | ಕಿವುಡು ಮಕ್ಕಳ ಶಾಲೆ ವಸತಿಯುತ | 7 | 11 | 68 |
| | | **1** | ಮಾಹೇಶ್ವರಿ ಕಿವುಡು ಮಕ್ಕಳ ಶಾಲೆ ಕೃಷ್ಣದೇವರಾಯ ವೃತ್ತದ ಹತ್ತಿರ. ನೆಹರೂ ನಗರ, ಬೆಳಗವಿ. ಸಂಪರ್ಕ ಸಂಖ್ಯೆ 0831 247 1482 | .... | ... | 1982 ರಾಜ್ಯ ಅನುದಾನ ಸ೦ಹಿತೆ | | |

| | | | | | | | |
|---|---|---|---|---|---|---|---|
| 9 | **ಬೆಳಗಾಂ** | **2** | ದಿ ಅಪಾಸ್ಟೋಲಿಕ್ ಕಾರ್ಮಲ್ ಎಜುಕೇಷನ್ ಸೊಸೈಟಿ (ರಿ), ಸೆಂಟ್ ಆನ್ಸ್ ಕಾನ್ವೆಂಟ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ. | ಕಾರ್ಮಲ್ ವಿದ್ಯಾವಿಕಾಸ ಬುದ್ದಿಮಾಂದ್ಯ ಮಕ್ಕಳ ವಸತಿಶಾಲೆ ದೇವಲಾಪುರ ಬೈಲಹೊಂಗಲ ಬೆಳಗಾವಿ | ಬುದ್ಧಿಮಾಂದ್ಯ | 7 | 7 | 49 |
| | | **3** | ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ (ರಿ), ಯಕ್ಸಂಬಾ, ಚಿಕ್ಕೋಡಿ ತಾ॥, ಬೆಳಗಾವಿ | ಆಶಾಜ್ಯೋತಿ ಬುದ್ದಿಮಾಂದ್ಯ ಮಕ್ಕಳ ವಸತಿ ಶಾಲೆ ಯಕ್ಷಂಬಾ ಬೆಳಗಾವಿ | ಬುದ್ಧಿಮಾಂದ್ಯ | 11 | 13 | 78 |
| **10** | **ಬಿಜಾಪುರ** | **1** | ಶ್ರೀ ಶಿವಶಂಕರ ವಿದ್ಯಾವರ್ಧಕ ಕೇಂದ್ರ ರಿ, ಝಳಕಿ ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ | ಶ್ರೀ ಗುರುಚಂದ್ರಶೇಖರ ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ ಝಳಕಿ ಇಂಡಿ ತಾಲ್ಲೂಕು ವಿಜಯಪುರ | ಕಿವುಡು ಮಕ್ಕಳ ಶಾಲೆ | 9 | 20 | 86 |
| | | **2** | ಪರಮಾನಂದ ಜನಸೇವಾ ಶಿಕ್ಷಣ ಸಮಿತಿ ರಿ ಮುಳಸಾವಳಗಿ, ಸಿಂಧಗಿ ತಾ. ವಿಜಯಪುರ | ಎಂ.ಎಸ್.ಬಿ ಕಿವುಡ ಮೂಕ ಮಕ್ಕಳ ವಸತಿಯುತ ಶಾಲೆ ಗೋಲಗೇರಿ ಸಿಂಧಗಿ ಗಾ ವಿಜಯಪುರ | ಕಿವುಡು ಮಕ್ಕಳ ಶಾಲೆ | 7 | 10 | 50 |
| 11 | **ಬಾಗಲಕೋಟೆ** | **1** | ಸಮಗ್ರ ಜೀವನ ವಿಕಾಸ ಸಂಸ್ಥೆ ರಿ, ಮುಧೋಳ, ವಾರ್ಡ್ ನಂ.–2, ಹೌಸ್ ನಂ.537/ಬಿ ಮುಧೋಳ ಬಾಗಲಕೋಟೆ ಜಿಲ್ಲೆ | ಸಜೀವಿ ಅಂಧ ಮಕ್ಕಳ ವಸತಿಯುತ ಶಾಲೆ ಮುಧೋಳ್ ಬಾಗಲಕೋಟೆ | ಅಂಧ ಮಕ್ಕಳ ಶಾಲೆ | 11 | 13 | 98 |
| | | **2** | ಸರ್ವೋದಯ ಮಹಿಳಾ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ರಿ ಜಮಖಂಡಿ ಬಾಗಲಕೋಟೆ | ಸರ್ವೋದಯ ಕಿವುಡು ಮಕ್ಕಳ ವಸತಿಯುತ ಶಾಲೆ | ಕಿವುಡು ಮಕ್ಕಳ ಶಾಲೆ | 16 | 17 | 110 |
| **12** | **ಧಾರವಾಡ** | **1** | ಶ್ರೀ ಆರೋಢ ಅಂಗವಿಕಲರ ಶಿಕ್ಷಣ ಸಂಸ್ಥೆ (ರಿ), ನಂ.17, 2ನೇ ಕ್ರಾಸ್, ಮಗಚಿಕೊಂಡಿ ಲೇಔಟ್, ಸಿದ್ಧಾರೂಢ ಮಠ ಮುಖ್ಯರಸ್ತೆ, ಹಳೇಹುಬ್ಬಳ್ಳಿ, | ಅಂಧ ಮಕ್ಕಳ ವಸತಿಯುತ ಶಾಲೆ | ಅಂಧ ಮಕ್ಕಳ ಶಾಲೆ | 13 | 11 | 92 |
| | | **2** | ವಿಶ್ವಧರ್ಮ ಮಹಿಳಾ ಮತ್ತು ಮಕ್ಕಳ ಶಿಕ್ಷಣ ಸೇವಾಶ್ರಮ ಸಮಿತಿ ರಿ, ವೀರಾಪುರ ಓಣಿ, ಹಕ್ಕಲ, ಹುಬ್ಬಳ್ಳಿ, ಧಾರವಾಡ ಜಿಲ್ಲೆ | ವಿಶ್ವಧರ್ಮ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 19 | 17 | 131 |
| | | **3** | ಮನೋವಿಕಾಸ ಇನ್ಸ್ಟಿಟ್ಯೂಟ್ ರಿಹ್ಯಾಬಿಲಿಟೇಷನ್ ಸರ್ವಿಸ್ ದೇವಾಂಗ ಬೀದಿ ಹುಬ್ಬಳ್ಳಿ ಧಾರವಾಡ | ಮನೋವಿಕಾಸ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 11 | 12 | 84 |
| **13** | **ಗದಗ** | **1** | ಮಂಜು ಎಜುಕೇಷನ್ ಸೊಸೈಟಿ, ಬೆಟಗೇರಿ, ಗದಗ ಜಿಲ್ಲೆ. | ಮಂಜು ಬುದ್ಧಿಮಾಂದ್ಯ ಮಕ್ಕಳ ಶಾಲೆ | ಬುದ್ಧಿಮಾಂದ್ಯ | 9 | 9 | 61 |
| | | **2** | ಶ್ರೀ ಬಿ.ಡಿ ತಟ್ಟಿ (ಅಣ್ಣವರ) ಮೆಮೊರಿಯಲ್ ಚಾರಿಟಬಲ್ ಟ್ರಸ್ಟ್ ರಿ ಲಕ್ಷ್ಮೇಶ್ವರ ಗದಗ | ಬಿ.ಡಿ ತಟ್ಟಿ ಕಿವುಡ ಮಕ್ಕಳ ವಸತಿಯುತ ಶಾಲೆ ಲಕ್ಷ್ಮೇಶ್ವರ ಗದಗ | ಕಿವುಡು ಮಕ್ಕಳ ಶಾಲೆ | 16 | 20 | 162 |
| | | **3** | ಯೋಗೀಶ್ವರ ವಿವಿದೊದ್ದೇಶ ಸಂಸ್ಥೆ (ರಿ), ಹೊಳೆ ಆಲೂರು, ರೋಣ ತಾ॥, ಗದಗ ಜಿಲ್ಲೆ | ಜ್ಞಾನಸಿಂಧು ಅಂಧ ಮಕ್ಕಳ ವಸತಿಯತ ಶಾಲೆ, | ಅಂಧ ಮಕ್ಕಳ ಶಾಲೆ | 12 | 10 | 0 |
| **14** | **ಹಾವೇರಿ** | **1** | ಶ್ರೀ ಚನ್ನಬಸವೇಶ್ವರ ಗ್ರಾಮೀಣ ವಿದ್ಯಾಸಂಸ್ಥೆ(ರಿ) ಶಿಗ್ಗಾಂವಿ ಹಾವೇರಿ | ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿರವರ ಕಿವುಡ ಮಕ್ಕಳ ವಸತಿ ಶಾಲೆ | ಕಿವುಡು ಮಕ್ಕಳ ಶಾಲೆ | 9 | 11 | 75 |
| | | **2** | ಸೇವಾ ಅಂಧರ ಶಾಲೆ, ರಾಣಿಬೆನ್ನೂರು, ಹಾವೇರಿ ಜಿಲ್ಲೆ | ಅಂಧ ಮಕ್ಕಳ ವಸತಿಯುತ ಶಾಲೆ | ಅಂಧ ಮಕ್ಕಳ ಶಾಲೆ | 19 | 25 | 145 |

| | | | | | | | | |
|---|---|---|---|---|---|---|---|---|
| 15 | ಕಾರವಾರ | 1 | ಜ್ಞಾನಪ್ರಜ್ಞ ವಿದ್ಯಾಸಂಸ್ಥೆ ರಿ, ದೇಶಪಾಂಡೆ ನಗರ, ಮುಂಡಗೋಡ, ಕಾರವಾರ | ಜ್ಞಾನಪ್ರಜ್ಞಾ ಅಂಧ ಮಕ್ಕಳ ವಸತಿಯುತ ಶಾಲೆ ದೇಶಪಾಂಡೆ ನಗರ ಮುಂಡಗೋಡ ಕಾರವಾರ | ಅಂಧ ಮಕ್ಕಳ ಶಾಲೆ | 8 | 9 | 65 |
| | | 2 | ಕಾರವಾರ ಡಾಯೋಸಿಸನ್ ಡೆವಲಪ್‌ಮೆಂಟ್ ಕೌನ್ಸಿಲ್, (ಕೆ.ಡಿ.ಡಿ.ಸಿ.) (ರಿ), ಬಿಷಪ್ ನಿವಾಸ, ಕಾರವಾರ–581302 | ಆಶಾ ನಿಕೇತನ ಕಿವುಡ ಮಕ್ಕಳ ವಸತಿಯುತ ಶಾಲೆ, ಬುಕ್ ಬೈಂಡರ್ ರಸ್ತೆ, ಕಾಜುಭಾಗ, ಕಾರವಾರ್ರ | ಕಿವುಡು ಮಕ್ಕಳ ಶಾಲೆ | 7 | 6 | 53 |
| | | 3 | ಅಜಿತ ಮನೋಚೇತನಾ ಟ್ರಸ್ಟ್ ರಿ ಮರಾಠಿಕೊಪ್ಪ ಶಿರಸಿ ಉತ್ತರ ಕನ್ನಡ | ವಿಕಾಸ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | ಬುದ್ಧಿಮಾಂದ್ಯ | 5 | 4 | 38 |
| 16 | ಚಿಕ್ಕಮಗಳೂರು | 1 | ಶ್ರೀ ನಿವೇದಿತಾ ವಿದ್ಯಾಸಂಸ್ಥೆ ಬಿಕ್ಕೋಡು ಬೇಲೂರು ತಾ. ಹಾಸನ ಜಿಲ್ಲೆ ಮೊ.ಸಂ.9742627256 | ನಿವೇದಿತಾ ವಿದ್ಯಾ ಶ್ರವಣದೋಷವುಳ್ಳ ಮಕ್ಕಳ ವಸತಿ ಶಾಲೆ ಕಡೂರು ಚಿಕ್ಕಮಗಳೂರು | ಕಿವುಡು ಮಕ್ಕಳ ಶಾಲೆ | 11 | 14 | 71 |
| | | 2 | ಶ್ರೀ ನಿವೇದಿತಾ ವಿದ್ಯಾಸಂಸ್ಥೆ (ರಿ), ಬಿಕ್ಕೋಡು ಬೇಲೂರು ತಾ. ಹಾಸನ ಜಿಲ್ಲೆ ಮೊ.ಸಂ.9742627256 | ನಿವೇದಿತಾ ವಿದ್ಯಾ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ, ಜಿ.ಸೂರ್ಯನಾರಾಯಣ ಮತ್ತು ವಸಂತಕುಮಾರಿ, ಕಟ್ಟಡ, 2ನೇ ಕ್ರಾಸ್, ಕಡೂರು, ಚಿಕ್ಕಮಗಳೂರು ಜಿಲ್ಲೆ ಕಡೂರು ಚಿಕ್ಕಮಗಳೂರು | ಬುದ್ಧಿಮಾಂದ್ಯ | 16 | 16 | 85 |
| 17 | ಕೊಡಗು | 1 | ಚೆಶೈರ್ ಹೋಮ್, ಕೊಡಗು | ಬುದ್ಧಿಮಾಂದ್ಯ ಮಕ್ಕಳ ಶಾಲೆ | ಬುದ್ಧಿಮಾಂದ್ಯ | 6 | 6 | 42 |
| | | 2 | ಕೊಡಗು ವಿದ್ಯಾಲಯ, ಸಿದ್ದಾಪುರ ರಸ್ತೆ, ಕೊಡಗು, ಮಡಿಕೇರಿಜಿಲ್ಲೆ, | ಆಪರ್ಚುನಿಟಿ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ ಮಡಿಕೇರಿ | ಬುದ್ಧಿಮಾಂದ್ಯ | 5 | 4 | 35 |
| 18 | ಮೈಸೂರು | 1 | ಸಾಯಿರಂಗ ವಿದ್ಯಾಸಂಸ್ಥೆ ಕಿವುಡು ಗಂಡು ಮಕ್ಕಳ ವಸತಿ' ಪಾಠಶಾಲೆ #764/ಎ, ಬಿ ಬಡಾವಣೆ ಬನ್ನಿಮಂಟಪ ಮೈಸೂರು | ಸಾಯಿರಂಗ ಕಿವುಡು ಗಂಡು ಮಕ್ಕಳ ವಸತಿಯುತ ಶಾಲೆ, ಮೈಸೂರು | ಕಿವುಡು ಮಕ್ಕಳ ಶಾಲೆ | 15 | 16 | 119 |
| | | 2 | ಡಾಟರ್ಸ್ ಆಫ್ ಅವರ್ ಲೇಡಿ ಮರ್ಸಿ ಕಿವುಡು ಹೆಣ್ಣು ಮಕ್ಕಳ ವಸತಿ ಪಾಠಶಾಲೆ, ಓಲ್ಡ್ ಹೆಚ್.ಡಿ.ಕೋಟೆ ರಸ್ತೆ, ಶ್ರೀರಾಂಪುರ ಮೈಸೂರು | ಮರ್ಸಿ ಶ್ರವಣದೋಷವುಳ್ಳ ಮಕ್ಕಳ ಶಾಲೆ, ಮೈಸೂರು | ಕಿವುಡು ಮಕ್ಕಳ ಶಾಲೆ | 17 | 12 | 129 |
| | | 3 | ರಂಗರಾವ್ ಸ್ಮಾರಕ ಅಂಗವಿಕಲರ ಶಾಲೆ – ಅಂಧ ಹೆಣ್ಣು ಮಕ್ಕಳ ವಸತಿ ಶಾಲೆ #1/ಸಿ, ಕೆ.ಆರ್.ಎಸ್ ರಸ್ತೆ ಮೇಟಗಳ್ಳಿ ಮೈಸೂರು | ರಂಗರಾವ್ ಸ್ಮಾರಕ ಅಂಧ ಹೆಣ್ಣು ಮಕ್ಕಳ ವಸತಿಶಾಲೆ, ಮೈಸೂರು | ಅಂಧ ಮಕ್ಕಳ ಶಾಲೆ | 9 | 9 | 88 |
| 19 | ಮಂಡ್ಯ | 1 | ಜ್ಞಾನವಿಕಾಸ ಎಜುಕೇಷನ್ ಟ್ರಸ್ಟ್ ರಿ, ಪಾಂಡವಪುರ ತಾ॥, ಮಂಡ್ಯ ಜಿಲ್ಲೆ | ಜ್ಞಾನವಿಕಾಸ ಕಿವುಡು ಮತ್ತು ಮೂಕ ಮಕ್ಕಳ ವಸತಿಶಾಲೆ ಚಿನಕುರಳಿ, ಪಾಂಡವಪುರ , ಮಂಡ್ಯ ಜಿಲ್ಲೆ | ಕಿವುಡು ಮಕ್ಕಳ ಶಾಲೆ | 17 | 20 | 116 |
| | | 2 | ಸೆಂಟ್ ಥಾಮಸ್ ಮಿಷನ್ ಸೊಸೈಟಿ ಮಂಡ್ಯ | ಆಶಾ ಸದನ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ, ಕಿರಂಗದೂರು, ಮದ್ದೂರು ತಾ: | ಬುದ್ಧಿಮಾಂದ್ಯ | 22 | 21 | 154 |
| | | 3 | ಮೌಂಟ್ ಪೋರ್ಟ್ ಎಜುಕೇಷನ್ ಅಂಡ್ ಚಾರಿಟೇಬಲ್ ಟ್ರಸ್ಟ್, ಲೇಕ್ ಮೌಂಟ್‌ಫೋರ್ಟ್ ಶಾಲೆ, ಕುರುಡು ಸೊನ್ನೇನಹಳ್ಳಿ, ವಿರ್ಗೋನಗರ ಅಂಚೆ, ಬೆಂಗಳೂರು | ಮೌಂಟ್‌ಫೋರ್ಟ್ ಕಿವುಡ ಮಕ್ಕಳ ಶಾಲೆ, ಬೆಳಗೊಳ, ಶ್ರೀರಂಗಪಟ್ಟಣ ತಾ, ಮಂಡ್ಯ ಜಿಲ್ಲೆ | ಕಿವುಡು ಮಕ್ಕಳ ಶಾಲೆ | 10 | 10 | 80 |

| | | | | | | | | |
|---|---|---|---|---|---|---|---|---|
| 20 | ಉಡುಪಿ | 1 | ಗುರುರಾಘವೇಂದ್ರ ಸೇವಾ ಟ್ರಸ್ಟ್ (ರಿ) ಕಾರ್ಕಳ, ಉಡುಪಿ ಜಿಲ್ಲೆ | ವಿಜೇತ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ಪರುಪ್ಪು, ಕಾರ್ಕಳ, ಉಡುಪಿ ಜಿಲ್ಲೆ | ಬುದ್ಧಿಮಾಂದ್ಯ | 7 | 10 | 49 |
| | | 2 | ಮಾನಸ ಪುವರ್ನಸತಿ ಮತ್ತು ತರಬೇತಿ ಕೇಂದ್ರ ಉಡುಪಿ ಮೊ.ಸಂ.9886132013 | ಮಾನಸ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ ಹಾಗೂ ಪುನರ್ವಸತಿ ಕೇಂದ್ರ ಉಡುಪಿ | ಬುದ್ಧಿಮಾಂದ್ಯ | 16 | 16 | 111 |
| 21 | ಬಳ್ಳಾರಿ | 1 | ಡಾ.ಭೀಮ ವಿದ್ಯಾಸಂಸ್ಥೆ ರಿ, 15ನೇ ವಾರ್ಡ್, ಹನುಮಂತ ನಗರ, ಶಿರಗುಪ್ಪ, ಬಳ್ಳಾರಿ | ಜ್ಞಾನೋದಯ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ 9945187825 | ಬುದ್ಧಿಮಾಂದ್ಯ | 9 | 8 | 59 |
| | | 2 | ವಿಶ್ವಭಾರತಿ ಕಲಾನಿಕೇತನ ಮತ್ತು ಶಿಕ್ಷಣ ಸಂಸ್ಥೆ, ಬೆಳಗಲ್ ರಸ್ತೆ, ಬಳ್ಳಾರಿ | ಜಿ.ಚೆಂಗಾರೆಡ್ಡಿ ಸ್ಮಾರಕ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ vbkesbellary@gmail.com Ph: 9483639242 | ಬುದ್ಧಿಮಾಂದ್ಯ | 15 | 15 | 105 |
| 22 | ಬೀದರ್ | 1 | ಶ್ರೀ ಮಾಣಿಕ್ ಪ್ರಭು ಶಿಕ್ಷಣ ಸಂಸ್ಥೆ, ಮಾಣಿಕ್ ನಗರ, ಹುಮ್ನಾಬಾದ್ ತಾ॥, ಹುಮನಾಬಾದ್ ಬೀದರ್–585353 ಬೀದರ್ ಜಿಲ್ಲೆ. ದೂ.ಸಂ: 08483–270742 | ಶ್ರೀ ಮಾಣಿಕ್ ಪ್ರಭು ದೃಷ್ಟಿದೋಷವುಳ್ಳ ಮಕ್ಕಳ ವಸತಿ ಶಾಲೆ, ಮಾಣಿಕ್ ನಗರ, ಬೀದರ್ maniknagar@gamil.com 9448128389 | ಅಂಧ ಮಕ್ಕಳು | 11 | 9 | 60 |
| | | 2 | ಮಾರುತಿ ಹೆಲ್ತ್ ವೆಲ್ಫೇರ್ ಟ್ರಸ್ಟ್ (ರಿ), ಗುರುನಗರ, ಬೀದರ್ ಜಿಲ್ಲೆ | ವಿಶ್ವಾಸ್ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | ಬದ್ಧಿಮಾಂದ್ಯ | 10 | 6 | 66 |
| 23 | ಕಲಬುರಗಿ | 1 | ದಕ್ಷಿಣ ಭಾರತ ದಲಿತ ವಿದ್ಯಾಸಂಸ್ಥೆ (ರಿ), ಪ್ಲಾಟ್ ನಂ.113–118, ಪ್ರೊಫೇಸರ್ ಕಾಲೋನಿ, ಸೇಡಂ ರಸ್ತೆ, ಗುಲ್ಬರ್ಗಾ | ಸಿದ್ಧಾರ್ಥ ಕಿವುಡು ಮತ್ತು ಮೂಕ ಬಾಲ ಬಾಲಕಿಯರ ವಸತಿಯುತ ಶಾಲೆ | ಕಿವುಡು ಮಕ್ಕಳ ಶಾಲೆ | 10 | 3 | 75 |
| | | 2 | ಅಂಜೂಬಾಯಿ ಅಂಧ ಹೆಣ್ಣು ಮಕ್ಕಳ ಶಾಲೆ, ಕಲಬುರಗಿ ಜಿಲ್ಲೆ | ಅಂಧ ಮಕ್ಕಳ ವಸತಿಯುತ ಶಾಲೆ | ಅಂಧ ಮಕ್ಕಳ ಶಾಲೆ | **1982ರ ರಾಜ್ಯ ಅನುದಾನ ಸಂಹಿತೆ** | | |
| 24 | ಕೊಪ್ಪಳ | 1 | ಅಂಗವಿಕಲರ ಪುನಶ್ಚೇತನ ಸಂಸ್ಥೆ (ಏಆರ್‌ಡಿ), ವಿವೇಕಾನಂದ ಕಾಲೋನಿ, ಗಂಗಾವತಿ–583227. ಕೊಪ್ಪಳ ಜಿಲ್ಲೆ | ಮಾನಸ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ದಾಸನಾಳ, ಬಸಾಪಟ್ಟಣ (ಅಂಚೆ), ಗಂಗಾವತಿ ತಾ॥, ಕೊಪ್ಪಳ ಜಿಲ್ಲೆ ದೂ.ಸಂ.08533–238178, 238177 | ಬುದ್ಧಿಮಾಂದ್ಯ | 9 | 9 | 62 |
| 25 | ಯಾದಗಿರಿ | 1 | ನಿವೇದಿತ ಎಜುಕೇಷನ್ ಟ್ರಸ್ಟ್ (ರಿ) ಯಾದಗಿರಿ ಜಿಲ್ಲೆ ಇವರು ನಡೆಸುತ್ತಿರುವ 'ನಿವೇದಿತ ದೃಷ್ಟಿದೋಷವುಳ್ಳ ಮಕ್ಕಳ ವಸತಿಯುತ ಶಾಲೆ | ದೃಷ್ಟಿದೋಷವುಳ್ಳ ಮಕ್ಕಳ ವಸತಿ ಯುತ ಶಾಲೆ | ದೃಷ್ಟಿದೋಷವುಳ್ಳ | 8 | 3 | 58 |
| 26 | ಹಾಸನ | 1 | ರೋಟರಿ ಟ್ರಸ್ಟ್, ಎನ್.ಕೆ.ಗ್ಣಾಪಯ್ಯ ರೋಟರಿ ಶ್ರವಣದೋಷವುಳ್ಳ ಮಕ್ಕಳ ಶಾಲೆ, ಕೌಡಳ್ಳಿ, ಹಾಸನ | ಎನ್.ಕೆ.ಗಣಪಯ್ಯ ರೋಟರಿ ಶ್ರವಣದೋಷವುಳ್ಳ ಮಕ್ಕಳ ಶಾಲೆ | ಕಿವುಡು ಮಕ್ಕಳ ಶಾ | 11 | 7 | 80 |
| | | 2 | ವಿದ್ಯಾರಣ್ಯ (ರಿ) ಬೆಂಗಳೂರು ಪೂರ್ವ ತಾ: | ಅವಕಾಶ ಬುದ್ಧಿವಿಕಲಚೇತನ ಮಕ್ಕಳ ಶಾಲೆ | ಕಿವುಡು ಮಕ್ಕಳ ಶಾಲೆ | 8 | 10 | 52 |

| | | | | | | | | |
|---|---|---|---|---|---|---|---|---|
| 27 | ದಕ್ಷಿಣ ಕನ್ನಡ | 1 | ಗಣೇಶ ಸೇವಾ ಟ್ರಸ್ಟ್ ಫಾರ್ ಎಕ್ಸೆಷನಲ್ ಪರ್ಸನ್ಸ್, ಶಕ್ತಿನಗರ, ದಕ್ಷಿಣ ಕನ್ನಡ | ಸಾನಿಧ್ಯ ಮಾನಸಿಕ ಭಿನ್ನ ಸಾಮರ್ಥ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 18 | 3 | 112 |
| | | | ಸೇವಾ ಭಾರತಿ ಟ್ರಸ್ಟ್ (ರಿ) ಬಾಲಮಾರುತಿ ವ್ಯಾಯಾಮ ಮಂಡಳಿ, ಮಂಗಳೂರು | ಕ್ಯಾಥರಿನ್ ಲೋಬೋ ಅಂಧ ಮಕ್ಕಳ ಶಾಲೆ, ಮಂಗಳೂರು | ಅಂಧ ಮಕ್ಕಳ ಶಾಲೆ | 9 | 7 | 26 |
| 28 | ದಾವಣಗೆರೆ | 1 | ಅಂಗವಿಕಲರ ಆಶಾಕಿರಣ ಟ್ರಸ್ಟ್, ದಾವಣಗೆರೆ | ಭಾವೈಕ್ಯತಾ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 25 | 27 | 178 |
| | | 2 | ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ,ದಾವಣಗೆರೆ | ಶ್ರೀ ಮೌನೇಶ್ವರಿ ಕಿವುಡು ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ | ಕಿವುಡು ಮಕ್ಕಳ ಶಾಲೆ | 17 | 35 | 172 |
| 29 | ರಾಯಚೂರು | 1 | ಶ್ರೀ ಮಾಣಿಕ್ ಪ್ರಭು ಶಿಕ್ಷಣ ಸಂಸ್ಥೆ, ಮಾಣಿಕ್ ನಗರ, ಹುಮ್ನಾಬಾದ್ ತಾ॥, ಹುಮನಾಬಾದ್ ಬೀದರ್-585353 ಬೀದರ್ ಜಿಲ್ಲೆ. ದೂ.ಸಂ: 08483-270742 | ಶ್ರೀ ಮಾಣಿಕ್ ಪ್ರಭು ದೃಷ್ಟಿದೋಷವುಳ್ಳ ಮಕ್ಕಳ ವಸತಿ ಶಾಲೆ, | ಅಂಧ ಮಕ್ಕಳ ಶಾಲೆ | 12 | 9 | 67 |